<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>

<u>ಶ್ರೀನಿವಾಸಪುರ</u>

ಸಿ.ಸಿ.ನಂ:382/2018

| | | | | |
|---|---|---|---|---|
| 01 | ಹೆಸರು | ನಟರಾಜ ರೆಡ್ಡಿ | C.W. | P.W. |
| 02 | ತಂದೆಯ ಹೆಸರು | ಲಕ್ಷ್ಮಣ ರಾಮಯ್ಯ | 7 | 3 |
| 03 | ವಯಸ್ಸು | 49 ವರ್ಷ | ಪ್ರಮಾಣೀಕರಿಸಲಾದ ದಿನಾಂಕ | |
| 04 | ಉದ್ಯೋಗ | ವ್ಯಾಪಾರ | 14.10.2022 | |
| 05 | ಊರು | ಗಂಡ್ರಾಜಪಲ್ಲಿ ಗ್ರಾಮ | | |

**ಮುಖ್ಯ ವಿಚಾರಣೆ:** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನನಗೆ ಚಾಸಾ.1, 6 ಮತ್ತು 8 ನೇ ದವರು ಗೊತ್ತು. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ದಿನಾಂಕ: 30.08.2018 ರಂದು ಆದರಾಜಪಲ್ಲಿ ಗ್ರಾಮ ಮತ್ತು ಬೈಕೊತ್ತೂರು ಗ್ರಾಮದ ನಡುವೆ ರಸ್ತೆಯ ಪಕ್ಕದಲ್ಲಿ ಒಂದು ಸಾರ್ವಜನಿಕ ನೀರಿನ ಬೋರ್ವೆಲ್ ಇದ್ದು, ಸದರಿ ಬೊರ್ವೆಲ್ ಗೆ ಅಳವಡಿಸಿದ ಪ್ಯಾನಲ್ ಬೊರ್ಡ್ ಇರುವ ಕಬ್ಬಿಣದ ಡಬ್ಬವನ್ನು ಯಾರೋ ಒಡೆದು ಹಾಕಿದ್ದು, ನಾನು ಊರಿಗೆ ಹೋಗುತ್ತಿದ್ದು ಸಮಯ ಸುಮಾರು ಸಂಜೆ 5.00 ರಿಂದ 6.00 ಗಂಟೆ ಆಗಿತ್ತು, ಆ ಸಮಯದಲ್ಲಿ ಚಾಸಾ.1 ಮತ್ತು ಪೊಲೀಸರು ಅಲ್ಲಿ ಮಹಜರ್ ಮಾಡುತ್ತಿದ್ದು, ಅವರು ಅಲ್ಲಿದ್ದ ಡಬ್ಬವನ್ನು ತೆಗೆದುಕೊಂಡು ಹೋಗಿರುತ್ತಾರೆ ಮತ್ತು ಸ್ಥಳದಲ್ಲಿ ಒಂದು ದಾಖಲೆಗೆ ಒಂದು ಸಹಿ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.1, 5 ಮತ್ತು 8 ಮತ್ತು ಪೊಲೀಸರು ಇದ್ದರು. ಸಾಕ್ಷಿಯು ಕಬ್ಬಿಣದ ಡಬ್ಬವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

**(ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎಪಿಪಿ ರವರು ಪಾಟಿ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು).**

<u>**ಪಾಟೀ ಸವಾಲು ಎಪಿಪಿ ರವರಿಂದ:**</u>

ದಿನಾಂಕ: 31.08.2018 ರಂದು ಆರೋಪಿಗಳು ಮು.ಮಾ.1 ಅನ್ನು ನಾಶಪಡಿಸಿ, ಸರ್ಕಾರಕ್ಕೆ ನಷ್ಟ ಪಡಿಸಿದ್ದು ಅದರಂತೆ ಪೊಲೀಸರು ನನ್ನನ್ನು ಸ್ಥಳ ಮಹಜರ್ ಮತ್ತು ಜಪ್ತ ಪಂಚನಾಮೆಗೆ ಪಂಚರಾಗಿ

ಸಹಕರಿಸಲು ಕೇಳಿಕೊಂಡಾಗ, ನಾನು ಒಪ್ಪಿ ಹಾಜರಿದ್ದು ನನ್ನ ಸಮಕ್ಷಮ ಪಂಚನಾಮೆ ಜರುಗಿಸಿದ್ದು, ಅದರಂತೆ ನಾನು ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅಲ್ಲಿ ಸ್ಥಳದಲ್ಲಿ ಚಾಸಾ.6 ಮತ್ತು 8 ಇದ್ದರು ಎಂದರೆ ಸಾಕ್ಷಿ ಚಾಸಾ.6 ಇರಲಿಲ್ಲ, ಚಾಸಾ.8 ಮಾತ್ರ ಇದ್ದರು ಎಂದು ಉತ್ತರಿಸಿರುತ್ತಾರೆ. ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ.**

ಚಾಸಾ.**1** ರವರೊಂದಿಗೆ ನಾನು ವಿಶ್ವಾಸದಿಂದ ಇದ್ದೇನೆ ಎಂದರೆ ಸರಿ. ಪೊಲೀಸರು ನನಗೆ ಮಹಜರ್ ರಿಗೆ ಸಹಕರಿಸುವಂತೆ ಯಾವುದೇ ತಿಳುವಳಿಕೆ ಪತ್ರ ನೀಡಿರುವುದಿಲ್ಲ. ನಾನು ಆ ದಿನ ಗೌನಿಪಲ್ಲಿ ಇಂದ ಗಂಡ್ರಾಜಪಲ್ಲಿ ಗ್ರಾಮಕ್ಕೆ ಹೋಗುತ್ತಿದ್ದೆ. ನಾನು ಆ ದಿನ ಒಬ್ಬನೇ ನನ್ನ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಸದರಿ ವಾಹನದ ಸಂಖ್ಯೆಃ ಕೆಎ **07 8207** ಇರುತ್ತದೆ. ನಾನು ಗೌನಿಪಲ್ಲಿಯಿಂದ **5.15** ಗಂಟೆಗೆ ಬಿಟ್ಟಿರುತ್ತೇನೆ. ನಾನು ಘಟನಾ ಜಾಗದ ಬಳಿ ಹೋಗುತ್ತಿದ್ದಾಗ ಸಮಯ **5.30** ಗಂಟೆ ಆಗಿತ್ತು. ಅಲ್ಲಿ ನಾನು ಹೋಗುತ್ತಿದ್ದಾಗ ಅಲ್ಲಿ ಜನ ಮತ್ತು ಪೊಲೀಸರು ಸೇರಿದ್ದು, ಪೊಲೀಸರ ಹೆಸರು ನನಗೆ ಹೇಳಲಾಗುವುದಿಲ್ಲ. ಅಲ್ಲಿ ಸುಮಾರು **10** ರಿಂದ **15** ಜನ ಸೇರಿದ್ದರು. ಅವರ ಹೆಸರುಗಳನ್ನು ನನಗೆ ಹೇಳಲಾಗುವುದಿಲ್ಲ.

ನಿಪಿ.**2** ರಲ್ಲಿ ಇರುವ ಸಂಗತಿಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು, ಪೊಲೀಸರು ನನಗೆ ಮಹಜರ್ ಸಹಿ ಮಾಡುವಂತೆ ಹೇಳಿರುತ್ತಾರೆ. ನಾನು ಸ್ಥಳದ ಬಳಿ ಹೋದಾಗ ಪೊಲೀಸರು ಆಗಲೇ ಮಹಜರ್ ಅನ್ನು ಬರೆಯುತ್ತಿದ್ದರು. ಮಹಜರ್ ನಲ್ಲಿರುವ ವಿಚಾರಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಪಿ.**2** ಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮು.ಮಾ.**1** ಅನ್ನು ಯಾರು ಹಾನಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮು.ಮಾ.**1** ಇದ್ದ ಚಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ದಿನಾಂಕಃ**30.08.2018** ರಂದೇ ಸಾಯಂಕಾಲ **5** ರಿಂದ **6** ಗಂಟೆಗೆ ಪಂಚನಾಮೆಯನ್ನು ಬರೆದಿರುತ್ತಾರೆ. ದಿನಾಂಕಃ **30.08.2018** ಅನ್ನು ಹೊರತು ಪಡಿಸಿ ಬೇರೆ ದಿನ ಬೇರೆ ಯಾವುದೇ ಪಂಚನಾಮೆಯನ್ನು ಪೊಲೀಸರು ಮಾಡಿರುದಿಲ್ಲ ಎಂದರೆ ಸರಿ. ಮು.ಮಾ.**1** ರಸ್ತೆಯ ಪಕ್ಕದಲ್ಲಿರುವುದರಿಂದ ಯಾರು ಅದನ್ನು ಹಾನಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

ಚಾಸಾ.1 ಮತ್ತು ಆರೋಪಿಗಳಿಗೆ ಮಾತುಕತೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹೇಳುವಂತೆ ನಿಪಿ.2 ರಂತೆ ಯಾವುದೇ ಮಹಜರ್ ಅನ್ನು ಪೊಲೀಸರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ.1 ನೇ ದವರೊಂದಿಗೆ ನಾನು ವಿಶ್ವಾಸದಿಂದ ಇರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

ಸಹಿ/

(ಸಚಿನ್ ಎಚ್ . ಆರ್.)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ